ಕರ್ನಾಟಕ ಸರ್ಕಾರ
ಉಪತಹಶೀಲ್ದಾರರವರ ನ್ಯಾಯಾಲಯ
ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

---

ಸಂ/ಕಂ/ಪಹಣಿ/ವಿವಾದ/17/15-16 ದಿ. 4.3.16

---

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

---

**ವಾದಿಗಳು**
**ಶ್ರೀಮತಿ ಉಮಾದೇವಿ ಗಂಡ ವೀರಪ್ಪ**
**ಏಣಿಗಿ ಬಸಾಪುರ**

**ಪ್ರತಿವಾದಿಗಳು**
**ಶ್ರೀಮತಿ ವಿ.ಕೊಟ್ರಮ್ಮ**
**ಶ್ರೀಮತಿ ವಿ.ರತ್ನಮ್ಮ**
**ಏಣಿಗಿ ಬಸಾಪುರ**

---

**ವಿಷಯ :- ಏಣಿಗಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 250/ಜಿ/2 ವಿಸ್ತೀರ್ಣ 3-00 ಎಕರೆ ಜಮೀನು ಪವತಿ ವಾರಸು ಪ್ರಕಾರ ಹಕ್ಕುಬದಲಾವಣೆ ವಿಷಯವಾಗಿ ತಕರಾರು ದಾಖಲಾಗಿ ವಿಚಾರಣೆ**

---

**<u>ಪೀಠಿಕೆ :-</u>**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಏಣಿಗಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 250/ಜಿ/2 ವಿಸ್ತೀರ್ಣ 3-00 ಎಕರೆ ಜಮೀನು ಹಾಲೀ ಲೆಕ್ಕ ದಾಖಲು ವೀರಪ್ಪ ತಂದೆ ಸೋಮಪ್ಪ ಬಸಾಪುರ ಇವರ ಹೆಸರಿಗಿದ್ದು ಇವರು ದಿನಾಂಕ: 17/08/2008 ರಂದು ಮರಣ ಹೊಂದಿದ್ದು ಪವತಿ ವಾರಸು ಪ್ರಕಾರ ದಿವಂಗತರ ಹೆಂಡತಿ ವಾದಿಗಳು ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿ ಕೇಂದ್ರದಲ್ಲಿ ಅರ್ಜಿ ಮಾಡಿಕೊಂಡಿರುತ್ತಾರೆ. ಅರ್ಜಿಯು ಭೂಮಿ ಕೇಂದ್ರದಲ್ಲಿ ವಹಿವಾಟು ಸಂಖ್ಯೆ 99 ಹಾಗೂ ಹ.ನ.ಸಂಖ್ಯೆ 4-55/2014-15 ರಂತೆ ದಾಖಲಾಗಿ ನಮೂನೆ 12 ಹಾಗೂ ನೋಟಿಸು ನಮೂನೆ 21ನ್ನು ಭೂಮಿ ಕೇಂದ್ರದಿಂದ ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರ ಮುಖಾಂತರ ಗ್ರಾಮ ಲೆಕ್ಕಾಧಿಕಾರಿ ಏಣಿಗಿ ಇವರ ದ್ವಾರ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಲಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ, ತಕರಾರು ಅರ್ಜಿ ಸ್ವೀಕೃತಿ ಸಂಖ್ಯೆ 8302/2014-2015 ರಂತೆ ದಾಖಲಾಗಿರುತ್ತದೆ. ತಕರಾರು ದಾಖಲಾದ ಹಿನ್ನಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವು ಈ ಮೇಲಿನ ಸಂಖ್ಯೆಯಂತೆ ದಾಖಲಾಗಿ ದಿನಾಂಕ: 10-06-2015 ರಿಂದ ದಿನಾಂಕ: 04-03-2016 ರವರೆಗೆ ವಿಚಾರಣೆ ನಡೆಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಯ ಪರವಾಗಿ

ಶ್ರೀ ಕೆ.ಜಗದೀಶ ನ್ಯಾಯವಾದಿಗಳು ಹಾಗೂ ಪ್ರತಿವಾದಿಗಳ ಪರವಾಗಿ ಶ್ರೀ ಕೆ.ಮಹಾಬಲೇಶ್ವರ ಗೌಡ, ಶ್ರೀ ಸಿ.ಹುಲುಗಪ್ಪ ನ್ಯಾಯವಾದಿಗಳು ವಕಾಲತ್ ವಹಿಸಿಕೊಂಡಿರುತ್ತಾರೆ.

ಪ್ರತಿವಾದಿಗಳ ಪರವಾಗಿ ನ್ಯಾಯವಾದಿಗಳು ತಮ್ಮ ಲಿಖಿತ ವಾದ ಮಂಡಿಸುತ್ತಾ ಜಮೀನು ಮಾಲಿಕತ್ವ ಮತ್ತು ವಿಸ್ತೀರ್ಣದಲ್ಲಿ ವ್ಯತ್ಯಾಸವಾಗಿರುವುದಾಗಿ ಮತ್ತು ಒಟ್ಟಾರೆ ಜಮೀನು 22-43 ಎಕರೆ ಪ್ರದೇಶವಾಗಿದ್ದು ಇದರಲ್ಲಿನ ಹಕ್ಕುದಾರರು ಹದ್ದುಬಸ್ತು ಮಾಡಿಸಿಕೊಳ್ಳುವ ಅವಶ್ಯಕತೆ ಇರುವುದಾಗಿ ವಾದ ಮಂಡಿಸಿರುತ್ತಾರೆ. ಆದರೆ ಪ್ರತಿವಾದಿಗಳು ವಾದಿಯ ವಾರಸುದಾರರೇ ಅಥವಾ ಅವಿಭಕ್ತ ಕುಟುಂಬದ ಸದಸ್ಯರೇ ಅಥವಾ ಇನ್ನಾವುದೇ ರೀತಿಯ ಹಕ್ಕುದಾರರಾಗಿರುವ ಬಗ್ಗೆ ಲಿಖಿತ ವಾದದಲ್ಲಿ ಉಲ್ಲೇಖ ಇರುವುದಿಲ್ಲ ಹಾಗೂ ವಾದಿಗಳು ಸಲ್ಲಿಸಿರುವ ವಂಶವೃಕ್ಷ ಪರಿಶೀಲಿಸಲಾಗಿ ಹಾಲೀ ಲೆಕ್ಕದಾಖಲು ಹಕ್ಕುದಾರರ ಹೆಂಡತಿ ಇರುವುದು ದಾಖಲೆಗಳಿಂದ ಕಂಡು ಬರುತ್ತದೆ. ಇದರನ್ವಯ ವಾದಿಗಳು ಪವತಿ ವಾರಸು ಪ್ರಕಾರ ಹಕ್ಕು ಬದಲಾವಣೆಗೆ ಸಲ್ಲಿಸಿರುವ ಅರ್ಜಿಯು ಅಂಗೀಕೃತ ಅಂಶಕ್ಕೆ ಒಳಪಟ್ಟಿರುತ್ತದೆ. ಹಾಗೂ ಪ್ರತಿವಾದಿಗಳು ಕೇವಲ ಅಳತೆ ಬಗ್ಗೆ ವಿವರಣೆ ನೀಡಲಾಗಿದ್ದು ವಾರಸತ್ವ ಉಲ್ಲೇಖ ಇರುವುದಿಲ್ಲ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಏಣಿಗಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 250/ಜಿ/2 ವಿಸ್ತೀರ್ಣ 3-00 ಎಕರೆ ಜಮೀನನ್ನು ಪವತಿ ವಾರಸು ಹಕ್ಕುಗಳ ಪ್ರಕಾರ ವಾದಿ ಶ್ರೀಮತಿ ವಿ.ಉಮಾದೇವಿ ಗಂಡ ವೀರಪ್ಪ ಏಣ್ಗಿ ಬಸಾಪುರ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಈ ಆದೇಶವನ್ನು ತೆರದ ನ್ಯಾಯಾಲಯದಲ್ಲಿ ದಿನಾಂಕ: 4.3.16 ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ
ಹಂಪಸಾಗರ

**ಪ್ರತಿಗಳು :**

1) ವಾದಿ + ಪ್ರತಿವಾದಿಗಳು
2) ನ್ಯಾಯವಾದಿಗಳ ವಾದಿ
3) ಭೂಮಿ ಕೇಂದ್ರಕ್ಕೆ
4) ಕಡತಕ್ಕೆ